ಓ.ಎಸ್ ನಂ. 86/2018 ಡಿ.ಡಬ್ಲ್ಯೂ-6

**ಸಾಕ್ಷಿಯನ್ನು ದಿನಾಂಕಃ 18.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್ ಕೆ ವಕೀಲರಿಂದಃ</u>**

ನನಗೆ ಕನ್ನಡದಲ್ಲಿ ಓದಲು ಬರುತ್ತದೆ ಬರೆಯಲು ಬರುವುದಿಲ್ಲ. ಪ್ರಸ್ತುತ ದಾವೆಯ ನನಗೆ ತಿಳಿದಿರುತ್ತದೆ. ಸಾಕ್ಷಿಗೆ ಈ ದಾವೆಯನ್ನು ಯಾರು ಯಾರ ಮೇಲೆ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಎನ್ ನಾಗರಾಜು ರವರೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿಗೆ ಸಂಬಂದಿಸಿದಂತೆ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ದಾವಾಸ್ತಿಗೆ ಸಂಬಂದಿಸಿದಂತೆ ಯಾವುದೇ ದಾಖಲಾತಿಗಳಲ್ಲಿ ನಾನು ಸಾಕ್ಷಿ ಸಹಿಯನ್ನು ಮಾಡಿರುವುದಿಲ್ಲ. ಮಾಜಿ ಶಾಸಕರಾಗಿದ್ದಂತಹ ಮೃತ ಎನ್ ನಾಗರಾಜು ರವರ ಕುಟುಂಬದವರ ಬಗ್ಗೆ ನನಗೆ ತಿಳಿದಿರುತ್ತದೆ. ಅವರು ಮತ್ತು ನಾನು ವಿಶ್ವಾಸದಲ್ಲಿ ಇರುತ್ತೇವೆ. ನಾಗರಾಜು ರವರ ಮಗ ಶಂಕರ್ ಅಲಿಯಾಸ್ ಎನ್ ಉಮಾ ಶಂಕರ್ ರವರು ಈ ದಿನ ನ್ಯಾಯಾಲಯಕ್ಕ ಬಂದಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು 2 ನೇ ಪ್ರತಿವಾದಿ ರವರ ವಕೀಲರಿಂದ ತಯಾರಿಸಲಾಗಿರುತ್ತದೆ. ಸಾಕ್ಷಿಗೆ ಈ ದಿನ ಹಾಜರಿರುವ 2 ನೇ ಪ್ರತಿವಾದಿ ಶಂಕರ್ ರವರ ಜೊತೆಯಲ್ಲಿ ಈ ದಿನ ಏನ ಸಾಕ್ಷಿ ನುಡಿಯುಬೇಕು ಎಂದು ಮಾತನಾಡಿಕೊಂಡು ನೀವು ಬಂದಿರುತ್ತೀರಾ ಎಂದರೆ ಸಾಕ್ಷಿಯು ಅವರ ಜೊತೆಗೆ ನಾನು ಮಾತನಾಡಿರುವುದಿಲ್ಲ ನನಗೆ ತಿಳಿದಿರುವುದು ಹೇಳುತ್ತೇನೆ ಎಂದು ನುಡಿಯುತ್ತಾರೆ.

ದಾವಾಸ್ತಿ ಮೂಲತಃ ಸೋರಂ ದೇವಿಯವರಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಸೋರಂ ದೇವಿಯವರು ದಿನಾಂಕ 30.12.2003 ರಂದು ಪ್ರತಿವಾದಿ 5 ಸಿ ಎನ್ ನಾಗಣ್ಣ ರವರಿಗೆ ದಾವಾಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿ 5 ರವರು ಈ ದಾವೆಯ ವಾದಿ ಜಿ ಸಿ ಪುಟ್ಟಸ್ವಾಮಿ ರವರಿಗೆ ದಿನಾಂಕ 03.09.2004 ರಂದು ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಸ್ತಿಗೆ

ಸಂಬಂದಿಸಿದಂತೆ ಖಾತೆ ಮಾಡಿಸುವ ಸಲುವಾಗಿ ವಾದಿ ಮತ್ತು ಈ ಹಿಂದೆ ಇದ್ದ ಎನ್ ನಾಗರಾಜು ರವರ ಮಧ್ಯೆ ತಕರಾರು ನಡೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವಾಸ್ತಿಗೆ ಸಂಬಂದಿಸಿದಂತೆ ವಾದಿ ರವರು ಇದೇ ಪ್ರತಿವಾದಿಗಳ ವಿರುದ್ದ ಹುಣಸೂರು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಅವರ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

19 ವರ್ಷಗಳ ಹಿಂದೆ ಆಗಿದೆ ಎನ್ನಲಾದ ದಾನಪತ್ರದಲ್ಲಿ ನಾನು ಸಾಕ್ಷಿ ಸಹಿ ಮಾಡಿರುವುದಿಲ್ಲ. ಯಾವ ದಿನಾಂಕದಂದು ದಾವಾ ಆಸ್ತಿಯನ್ನು ಎನ್ ನಾಗರಾಜು ರವರಿಗೆ ಸ್ವಾಧೀನವನ್ನು ನೀಡಿಡಲಾಗಿತ್ತು ಎಂದರೆ ಸಾಕ್ಷಿಯು ದಿನಾಂಕ ನನಪಿರುವುದಿಲ್ಲ 2003 ರಲ್ಲಿ ಸ್ವಾಧೀನ ನೀಡಲಾಗಿತ್ತು ಎಂದು ನುಡಿಯುತ್ತಾರೆ. ಕಳೆದ ವರ್ಷ ವಿಜಯ ದಶಮಿ ಯಾವಾಗ ಆಚರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಸೆಪ್ಟೆಂಬರ್ ತಿಂಗಳಲ್ಲಿ ಆಚರಿಸಲಾಗಿರುತ್ತದೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರು ವಾದಿ ಪುಟ್ಟಸ್ವಾಮಿ ರವರನ್ನು ತೋರಿಸಿ ಸದರಿ ಪುಟ್ಟ ಸ್ವಾಮಿ ರವರ ನಿಮಗೆ ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯು ಈ ದಿನವೆ ಮೊದಲ ಬಾರಿ ನ್ಯಾಯಲಾಯದಲ್ಲಿ ಪುಟ್ಟ ಸ್ವಾಮಿಯವರನ್ನು ನೋಡುತ್ತಿದ್ದೇನೆ ಎಂದು ನುಡಿಯುತ್ತಾರೆ. ದಾವಾಸ್ತಿಯ ಚಕ್ಕಬಂದಿ ತಿಳಿದಿರುತ್ತದೆ. ಪೂರ್ವಕ್ಕೆ ಮರಪ್ಪ ರವರ ಜಾಗ ಈಗ ಸಧ್ಯಕ್ಕೆ ಅವರು ಶೆಡ್ಡನ್ನು ಹಾಕಿರುತ್ತಾರೆ. ಪಶ್ಚಿಮಕ್ಕೆ ಶಾರದಮ್ಮ ರವರ ಮನೆ, ದಕ್ಷಿಣಕ್ಕೆ ರಾಮಚಂದ್ರ ರವರ ಮನೆ ಹಾಗೂ ಉತ್ತರಕ್ಕೆ ರಸ್ತೆ. (22 ½ X 77). ಪ್ರಸ್ತುತ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಆದರು ಸಹಿತ ಎನ್ ನಾಗರಾಜು ರವರ ಮಗನ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೇ ಎಂದರೆ ಸರಿಯಲ್ಲ.

**ಮರುವಿಚರಣೆ ಇಲ್ಲಃ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ